ಹಾಗೂ ಕೆಲವೊಂದು ದಾಖಲಾತಿ ಇಲ್ಲದಿದ್ದರಿಂದ ನಿಗಧಿತ ಅವಧಿಯಲ್ಲಿ ಖಾತೆ ಪುನರ್ ಸ್ಥಾಪನೆ ಮಾಡಲು ಸಾಧ್ಯವಾಗದೆ ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಅಧಿಕಾರದ ಅವಧಿಯನ್ನು ತಹಸೀಲ್ದಾರರು, ಉಪ ವಿಭಾಗಾಧಿಕಾರಿಗಳಿಗೆ ಮೂಲಕ ಸರ್ಕಾರವನ್ನು ಜಿಲ್ಲಾಧಿಕಾರಿಗಳು ಕೋರಿರುತ್ತಾರೆ. ಜಿಲ್ಲೆಗಳಲ್ಲಿ ಸ್ವೀಕರಿಸಲಾದ 180 ಅರ್ಜಿಗಳಲ್ಲಿ 167 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಇದು ಶೇಕಡ 93 ರಷ್ಟು ಪ್ರಗತಿಯಾಗಿರುವ ಅಂಶವನ್ನು ಗಮನಿಸಬಹುದಾಗಿದೆ. ಸರ್ಕಾರದ ನಿಯಮ 119ಕ್ಕೆ ಸೂಕ್ತ ತಿದ್ದುಪಡಿ ತರುವ ಬಗ್ಗೆ ಕಾನೂನು ಇಲಾಖೆಯೊಂದಿಗೆ ಸಮಾಲೋಚನೆ ನಡೆದಿರುತ್ತದೆ. ಈ ಖಾತೆ ಪುನರ್ ಸ್ಥಾಪನೆ ಮಾಡುವುದರ ಬಗ್ಗೆ ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಇರುವುದರಿಂದ ಸರ್ಕಾರದ ಪಡ ನಿಂತಿದೆ. 1990ರಲ್ಲಿ ಒಂದು ಸಾರಿ ಮೂರು ವರ್ಷ ಅವಧಿ ಕಟ್ಟುವಂಥದ್ದು, ನಂತರ 1991ರಲ್ಲಿ ಇನ್ನು ಒಂದು ವರ್ಷ ಜಾಸ್ತಿ ಕೊಡಬೇಕೆಂದು ಒಟ್ಟು 4 ವರ್ಷ ಕೊಟ್ಟಿದೆ. 1996 ರವರೆಗೆ ಇದು ವಿಸ್ತರಣೆ ಮಾಡಬೇಕೆಂದು ಇವತ್ತು ಪ್ರಕರಣಗಳು ಇವೆ. ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರೇ, ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಷ್ಟೇ ಅಲ್ಲ, ಇಡೀ ರಾಜ್ಯದಲ್ಲಿ ಇಂತಹ ಒಂದು ಸರ್ಕಾರದ ಪಡ ಇರತಕ್ಕಂಥ ವ್ಯವಸ್ಥೆ ಇದೆ. ಇದರಲ್ಲಿ ಅವಧಿಯನ್ನು ವಿಸ್ತರಣೆ ಮಾಡಬೇಕು ಎನ್ನುವ ಉದ್ದೇಶ ಸರ್ಕಾರದ ಮುಂದಿದೆ. ಇವತ್ತು ಇದನ್ನು ಕಾನೂನು ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ರೂಲ್ಸ್‌ಗೆ ಸೂಟಬಲ್ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಸೆಕ್ಷನ್ 119ರಲ್ಲಿ ಅಧಿಕಾರ 6 ತಿಂಗಳು ಎಂದು ಕೊಟ್ಟಿದ್ದಾರೆ, ಅದಕ್ಕೋಸ್ಕರ 6 ತಿಂಗಳು ಮಾತ್ರ ಮಾಡಿರುತ್ತೇವೆ. ಫರ್ದರ್ ಎಕ್ಸ್‌ಟೆಂಡ್ ಮತ್ತೆ ನಾವು ಇವತ್ತಿನ ದಿವಸ ಇನ್ನು ಎರಡು ಮೂರು ವರ್ಷ ಕೊಡಬೇಕಾಗುತ್ತದೆ. ಕಾನೂನು ಇಲಾಖೆ ಮುಂದಿದೆ, ಅದಕ್ಕೆ ಈ ರೂಲ್ಸ್‌ಗೆ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಮತ್ತು ಉರ ವಿಭಾಗಾಧಿಕಾರಿಗಳಿಂದ ಈ ಬಗ್ಗೆ ಸರ್ಕಾರಕ್ಕೆ ಕೇಳಿದ್ದಾರೆ. ಇದಕ್ಕೆ ಅಮೆಂಡ್‌ಮೆಂಟ್ ತರುವಂಥದ್ದು. ಇದಕ್ಕೆ ಸೂಟೆಬಲ್ ಅಮೆಂಡ್‌ಮೆಂಟ್‌ತಂದರೂ ಕೂಡ ಅದರ ಅವಧಿಯ ವಿಸ್ತರಣೆ ಕಾರ್ಯವನ್ನು ಮುಂದೆ ಮಾಡಿ ಇವರಿಗೆ ಅನುಕೂಲ ಮಾಡಿಕೊಡಲಾಗುವುದು.

(ಈ) ಉಳ್ಳಾಲ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ

+ ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ):– ಸನ್ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಉಳ್ಳಾಲ ನಗರ ಪಂಚಾಯಿತಿಯು ಸುಮಾರು 70 ಸಾವಿರ ಜನಸಂಖ್ಯೆಗೂ ಹೆಚ್ಚಿದೆ. ಸುಮಾರು 15 ಸಾವಿರಕ್ಕಿಂತ ಹೆಚ್ಚು ಮನೆಗಳು ಇವೆ. ಹಾಗೂ ಮಂಡಲ್ ಪಂಚಾಯತಿ ಇರುವಾಗ ಇಡೀ ರಾಜ್ಯದಲ್ಲಿ ಉಳ್ಳಾಲ ಮಂಡಲ ಪಂಚಾಯಿತಿ ಅತಿ ದೊಡ್ಡದು. ಈಗಾಗಲೇ ಅದು ವ್ಯಾಪಾರ ಮತ್ತು ವಾಣಿಜ್ಯ ಕೇಂದ್ರವಾಗಿ ಪರಿವರ್ತನೆಯಾಗಿದೆ. ನ್ಯಾಶನಲ್ ಹೈವೆ 17 ಈ ಕ್ಷೇತ್ರದಲ್ಲಿ ಹಾದು ಹೋಗುವಂಥದ್ದು. ಈ ಒಂದು ಕ್ಷೇತ್ರದಲ್ಲಿ ನೇತ್ರಾವತಿ ಮತ್ತು ಅರಬೀ ಸಮುದ್ರ ಇರುವುದರಿಂದ ಈ ಪೂರ್ತಿ ಭಾಗ ಉಪ್ಪು ನೀರು ಸಿಗುತ್ತದೆ. ಈ ಕ್ಷೇತ್ರದ ಜನರಿಗೆ ಬೋರ್‌ವೆಲ್ ನೀರು ದೊರಕುವುದು ಅಸಾಧ್ಯ. ನೀರು ಸಿಗುವುದರಿಂದ ಮತ್ತು ಬೆಳೆಯುತ್ತಿರುವ ನಗರವಾಗಿರುವುದರಿಂದ ತುಂಬೆವೆಂಟೆಡ್ ಡ್ಯಾಮ್ ಅಥವಾ ಮಂಗಳೂರು ಮಹಾನಗರ ಪಾಲಿಕೆಗೆ ಈಗಾಗಲೇ ತುಂಬೆವೆಂಟೆಡ್ ಡ್ಯಾಮ್‌ದಿಂದ ನೀರು ಒದಗಿಸುತ್ತಿದ್ದಾರೆ. ಆದ್ದರಿಂದ ನಾನು ರಾಜ್ಯಸರ್ಕಾರವನ್ನು ವಿನಂತಿಸಿಕೊಳ್ಳುತ್ತೇನೆ. ಮೊನ್ನೆ 6 ತಿಂಗಳ ಮುಂಚೆ ನಗರಾಭಿವೃದ್ಧಿ

ಮಂತ್ರಿಗಳು ಮೂಡಾ ಸಭೆಗೆ ಬಂದಾಗ ವಿನಂತಿ ಮಾಡಿದ್ದು, ರಾಜ್ಯ ಸರ್ಕಾರ 7 ಪುಣ್ಯ ಕ್ಷೇತ್ರಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿರುವುದರಿಂದ ಉಳ್ಳಾಲ್ ಸಯ್ಯದೆ ಮದನಿ ದುರ್ಗಾವು ದಕ್ಷಿಣ ಭಾರತದ ಅಜ್ಮೀರ್ ಕ್ಷೇತ್ರ ಎಂದು ಹೆಸರಾಗಿದೆ. ಆದ್ದರಿಂದ ಪುಣ್ಯ ಕ್ಷೇತ್ರಗಳಲ್ಲಿ ಇದನ್ನು ತೆಗೆದುಕೊಂಡು ಉಳ್ಳಾಲ್ ನಗರ ಪಂಚಾಯಿತಿಗೆ ತಾವು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಇದರ ಜೊತೆಗೆ ಉಳ್ಳಾಲ್‌ಗೆ ಒಳಚರಂಡಿ ವ್ಯವಸ್ಥೆಯನ್ನು ಕೈಗೊಳ್ಳಬೇಕೆಂದು ರಾಜ್ಯ ಸರ್ಕಾರವನ್ನು ನಾನು ವಿನಂತಿಸಿಕೊಳ್ಳುತ್ತೇನೆ.

+ ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಮತ್ತು ಕಂದಾಯ ಇಲಾಖೆ):- ಅಧ್ಯಕ್ಷರೇ, ಉಳ್ಳಾಲ್ ಪಂಚಾಯತಿಯನ್ನು, ಉಳ್ಳಾಲ್ ಮತ್ತು ಪರಮನೂರು ಪಂಚಾಯತಿಯನ್ನು ಸೇರಿಸಿ 1992 ರಲ್ಲಿ ಉಳ್ಳಾಲ ಟೌನ್ ಪಂಚಾಯಿತಿ ಸ್ಥಾಪನೆ ಮಾಡಲಾಯಿತು. ಉಳ್ಳಾಲ್ ಪಟ್ಟಣವು ಮಂಗಳೂರಿನಿಂದ 8 ಕಿ.ಮೀ ದೂರದಲ್ಲಿರುತ್ತದೆ. ಉಳ್ಳಾಲ್ ಪಟ್ಟಣದ ಜನಸಂಖ್ಯೆ 1991ರ ಜನಗಣತಿ ಪ್ರಕಾರ 45 ಸಾವಿರ ಆಗಿರುತ್ತದೆ. ಅಲ್ಲಿ ನೀರು ಸರಬರಾಜು ವ್ಯವಸ್ಥೆಯನ್ನು ಕೊಳವೆಭಾವಿ ಮೂಲಕ ಹಾಗೂ ತೆರೆದ ಭಾವಿ ಮೂಲಕ ಮಾಡಲಾಗುತ್ತಿದೆ. ಈ ಪಟ್ಟಣದಲ್ಲಿ ಸುಮಾರು 16 ಕೊಳವೆ ಭಾವಿಗಳು ಇವೆ.

ಈ ಕೊಳವೆ ಭಾವಿಗಳಿಗೆ ಕೈಪಂಪು ಮತ್ತು ಸಬ್‌ಮರ್ಸಿಬಲ್ ಪಂಪ್ ಸೆಟ್ ಗಳನ್ನು ಜೋಡಿಸಲಾಗಿದೆ. ಹಾಲಿ ಜನಸಂಖ್ಯೆಗೆ ದಿನಂಪ್ರತಿ 30 ಲೀಟರ್‌ನಷ್ಟು ನೀರು ಸರಬರಾಜು ಮಾಡಲಾಗುತ್ತಿದೆ.

ಉಳ್ಳಾಲ ಪಟ್ಟಣದ ಜನಸಂಖ್ಯೆಯು 2006ನೇ ಇಸವಿಗೆ 65,000 ಆಗಬಹುದೆಂದು ಹಾಗೂ 2021ನೇ ಇಸವಿಗೆ 1,00,000 ಜನಸಂಖ್ಯೆ ಆಗಬಹುದೆಂದು ಅಂದಾಜು ಮಾಡಲಾಗಿದ್ದು ಈ ಜನಸಂಖ್ಯೆಗೆ 3 ದಶಲಕ್ಷ ಗ್ಯಾಲನ್ ನೀರು ಬೇಕಾಗುತ್ತದೆ.

ಏಷಿಯನ್ ಅಭಿವೃದ್ಧಿ ಬ್ಯಾಂಕಿನ ನೆರವಿನಿಂದ ವೆಸ್ಟ್‌ಕೋಸ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಅಡಿಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮಾಡಲು ಉದ್ದೇಶಿಸಿರುವ ಸುಮಾರು 15 ಪಟ್ಟಣಗಳ ಪೈಕಿ ಉಳ್ಳಾಲ ಪಟ್ಟಣವೂ ಸೇರಿರುತ್ತದೆ.

ಉಳ್ಳಾಲ ಪಟ್ಟಣವು ಮಂಗಳೂರಿಗೆ ಬಹಳ ಸಮೀಪವಿದ್ದು ಬೃಹತ್ ಮಂಗಳೂರು ಮಾಸ್ಟರ್ ಪ್ಲಾನ್ ಅಡಿಯಲ್ಲಿ ಈ ಪಟ್ಟಣವೂ ಸೇರಿರುತ್ತದೆ. ಬೃಹತ್ ಮಂಗಳೂರು ನಗರಕ್ಕೆ ಏಷಿಯನ್ ಅಭಿವೃದ್ಧಿ ಬ್ಯಾಂಕ್‌ನ ಸಹಾಯದಲ್ಲಿ ಒಂದು ಯೋಜನೆಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಗಳಿಗೆ ಏಷಿಯನ್ ಅಭಿವೃದ್ಧಿ ಬ್ಯಾಂಕ್ ನೆರವನ್ನು ಪಡೆದು ಯೋಜನೆಗಳನ್ನು ಕಾರ್ಯಗತಗೊಳಿಸಿದಾಗ ಉಳ್ಳಾಲ ಪಟ್ಟಣಕ್ಕೂ ಸಮರ್ಪಕ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯು ದೊರಕುತ್ತದೆ.

(ಉ) ಗುಲ್ಬರ್ಗದಲ್ಲಿ ಹೋಮ್‌ಗಾರ್ಡ್ ಕಮಾಂಡೆಂಟ್ ರವರನ್ನು ವರ್ಗಾವಣೆ ಮಾಡಿರುವ ಬಗ್ಗೆ.